## ಇಲ್ಲಿಯವರೆಗೆ



ಹೇಮಾವತಿ ಮನ ತುಂಬ ಸುನಿಲ್‌ದೇ ಗುಂಗು. ಆತನನ್ನು ಮನದಲ್ಲೇ ತುಂಬಿಕೊಂಡು ದಿನಾ ಬಸ್‌ನಲ್ಲಿ ಸಂಧಿಸುವ ನೆಪ ಮಾಡುತ್ತಿದ್ದಳು. ಒಮ್ಮೆ ಧೈರ್ಯಮಾಡಿ ಆತನ ವಿಸಿಟಿಂಗ್ ಕಾರ್ಡ್ ತೆಗೆದುಕೊಂಡು ಕಾರ್ಖಾನೆಗೆ ಹೋಗುತ್ತಾಳೆ. ಸುನಿಲ್ ಫೋನ್ ಮಾಡಿ ಸಂಜೆ ಸಿಗುವುದಾಗಿ ಹೇಳುತ್ತಾನೆ. ಸಂಜೆಯವರೆಗೂ ಚಾತಕಪಕ್ಷಿಯಂತೆ ಊಟ ತಿಂಡಿಗಳಿಲ್ಲದೆ ಕಾದ ಹೇಮಾವತಿಗೆ ಕಾದಿದ್ದು ಭ್ರಮನಿರಸನ. ಸುನಿಲ್ ಹೇಮಾವತಿ ಮೇಲೆ ಯಾವುದೇ ಪ್ರೀತಿ ಪ್ರೇಮ ಭಾವನೆ ಇಲ್ಲ ಎಂದು ಹೇಳಿದ್ದೇ ಹೇಮಾವತಿಗೆ ಆಘಾತ. ಈ ನೆನಪಿನ ಸುಳಿಯಲ್ಲಿ ಇದ್ದು ವಾಸ್ತವಕ್ಕೆ ಮರಳಿದಾಗ ಆಕೆಯ ಗಂಡ ಬಂದು ಮಧ್ಯಾಹ್ನ ನಿದ್ದೆ ಮಾಡಬೇಡ ಎಂದು ಬೈಯುತ್ತಾನೆ.

ಅಲ್ಲಿಯೇ ನಿಲ್ಲಿಸಿಕೊಂಡು ಅವನೂ ಅದರೊಳಗೆ ಮಲಗಿದ್ದ. ಅಂದು ರಾತ್ರಿ ಅಮ್ಮ ಅಪ್ಪನನ್ನು ಪಕ್ಕದ ಮನೆಯಲ್ಲಿ ಮಲಗಿಸಿ ಅವಳೂ ಅಲ್ಲಿಯೇ ಉಳಿದಳು. ತಂದಿದ್ದ ಹೊಸ ಹಾಸಿಗೆಗಳನ್ನು  ನಡುಮನೆಯಲ್ಲಿ ಹಾಸಿ ನಮ್ಮ ಮೊದಲ ರಾತ್ರಿಗೆ ಸಜ್ಜು ಮಾಡಿದ್ದಳು. ಆ ದಿನವೇ ನನಗೆ ನನ್ನ ಗಂಡನ ಮುಂಗೋಪದ ಪರಿಚಯವಾಯಿತು. ಅಮ್ಮ ಕಾಯಿಸಿಟ್ಟಿದ್ದ ಹಾಲಿಗೆ ಸಕ್ಕರೆ ಹಾಕಿ ಹೊಸ ಸ್ಟೀಲಿನ ಲೋಟದಲ್ಲಿ ತುಂಬಿಕೊಂಡು ಅವರ ಪಕ್ಕದಲ್ಲಿ ಹೋಗಿ ಕುಳಿತೆ. ನನ್ನ ದೇಹವೆಲ್ಲಾ ಆತಂಕದಿಂದ ಕಂಪಿಸುತಿತ್ತು. ಕೈಗಳು ನಡುಗುತ್ತಿದ್ದವು. ಲೋಟವನ್ನು ಎರಡೂ ಕೈಗಳಲ್ಲಿ ಬಿಗಿಯಾಗಿ ಹಿಡಿದು ಅವರತ್ತ ಹಿಡಿದೆ. ಅವರು ಅದನ್ನು ನಿರುತ್ಸಾಹದಿಂದಲೇ ತೆಗದುಕೊಳ್ಳಲು ಕೈಚಾಚಿದಾಗ ನನ್ನ ಕೈಗಳು ವಿಪರೀತವಾಗಿ ನಡುಗಿ ಲೋಟದಲ್ಲಿದ್ದ ಅರ್ಧ ಹಾಲು ಹಾಸಿಗೆಯ ಮೇಲೆ ಚೆಲ್ಲಿಬಿಟ್ಟಿತು. ಅದನ್ನ ಕಂಡು ಅವರ ಕಣ್ಣುಗಳು ಕೋಪದಿಂದ ಕೆಂಪಗಾದವು. ಮುಖ ಗಡುಸಾಯಿತು. ಮೊದಲೇ ಈ ಹಾಸಿಗೆಯ ಮೇಲೆ ಮಲಗಲು ಮನಸ್ಸು ಬರುತ್ತಿಲ್ಲ.. ಇನ್ನು ಈ ಹಾಲಿನ ವಾಸನೆಯನ್ನು ಸಹಿಸಿಕೊಂಡು ಮಲಗಿದಂತೆಯೇ.. ಎಂದು ಮೆಲುದನಿಯಲ್ಲಿಯೇ ಗುಡುಗಿ ಹಾಲು ಚೆಲ್ಲಿರದ ಒಂದು ಹಾಸಿಗೆಯನ್ನು ಅತ್ತ ಎಳೆದುಕೊಂಡು ಮಲಗಿದರು. ದಿನವೂ ಹವಾ ನಿಯಂತ್ರಿತ ಕೊಠಡಿಯಲ್ಲಿ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿ ನಮ್ಮ ಮನೆಯ ವಾತಾವರಣಕ್ಕೆ ಅವರಿಗೆ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಅರಿತುಕೊಂಡು ನಾನು ಒಂದಷ್ಟು ಹೊತ್ತು ಸುಮ್ಮನೆ ಕುಳಿತಿದ್ದೆ. ಆಮೇಲೆ ಏನೂ ಮಾಡಲು ತೋಚದೆ ಎದ್ದು ದೀಪ ಆರಿಸಿ ಮಲಗಿಕೊಂಡೆ.

ಬೆಳಿಗ್ಗೆ ಎದ್ದಾಗ ಅಮ್ಮನಿಗೆ ಬೇಸರವಾದೀತೆಂದು ಮುಖದಲ್ಲಿ ಕೃತಕ ಸಂತೋಷ ತುಂಬಿಕೊಂಡು ನಗುತ್ತಲೇ ಅವಳೊಡನೆ ಮಾತನಾಡಿದೆ. ಅಮ್ಮನಿಗೆ ಅದನ್ನು ಕಂಡು ತೃಪ್ತಿಯಾಯಿತು ಎನ್ನುವುದು ಅವಳ ಸಡಗರದಿಂದಲೇ ನನಗೆ ತಿಳಿಯಿತು.

ಅದೇ ಕೊನೆ. ನನ್ನ ಗಂಡನಾಗಲೀ, ಅವರ ಮನೆಯವರಾಗಲೀ ಇದುವರೆಗೂ ಯಾರೂ ನಮ್ಮ ಮನೆಗೆ ಬಂದಿಲ್ಲ. ನಾನೇ ಊರಿಗೆ ಹೋಗಿ ಬರೋಣ ಬನ್ನಿ ಎಂದರೆ ನಿಮ್ಮ ಮನೆಯಲ್ಲಿ ಸರಿಯಾಗಿ ಕುಳಿತುಕೊಳ್ಳಲೂ ಒಂದು ಕುರ್ಚಿಯಿಲ್ಲ.. ಎಂದು ಕುರ್ಚಿಯೊಂದಿಗೇ ಹುಟ್ಟಿದವರಂತೆ ನನ್ನನ್ನು ಮೂದಲಿಸಿ, ಡ್ರೈವರನೊಂದಿಗೆ ಕಾರು ಕಳುಹಿಸುತ್ತೇನೆ ಹೋಗಿ ಬಾ.. ಎನ್ನುತ್ತಾರೆ. ಅವರಿಗೆ ನಾನೊಬ್ಬಳು ಮಾತ್ರ ಬೇಕಾಗಿತ್ತು.. ನನ್ನ ಮನೆ, ಮನೆತನ ಯಾವುದೂ ಬೇಡವಾಗಿತ್ತು ಎನ್ನವುದು ನನಗೆ ದೃಢವಾಗಿ ಹೋಗಿದೆ. ದೊಡ್ಡ ಕಾರ್ಪೊರೇಟ್ ಆಸ್ಪತ್ರೆಯೊಂದರಲ್ಲಿ ಪಾಪೂ ಹುಟ್ಟಿದ. ನಮ್ಮ ಊರಿನಲ್ಲಿ ಮನೆ ಚಿಕ್ಕದು.. ಸುತ್ತಮುತ್ತಲೂ ಆರೋಗ್ಯಕರವಾದ ವಾತಾವರಣವಿಲ್ಲ.. ಅಲ್ಲಿ ಪಾಪೂವನ್ನು ನೋಡಿಕೊಳ್ಳಲು ಆಗುವುದಿಲ್ಲವೆಂದು ಬಾಣಂತನಕ್ಕೂ ನಮ್ಮ ಊರಿಗೆ ಕಳುಹಿಸಲಿಲ್ಲ. ನಮ್ಮ ಭಾವನ ಮನೆಯಲ್ಲಿ ಅಡುಗೆ ಮಾಡಲು, ಮನೆಗೆಲಸ ಮಾಡಲು ಮೂವರು ಆಳುಗಳಿದ್ದಾರೆ. ಅಲ್ಲಿಯೇ ನನ್ನ ಅತ್ತೆಯ ಉಸ್ತುವಾರಿಯಲ್ಲಿ ನನ್ನ ಬಾಣಂತನ ನಡೆದು ಪಾಪೂವಿಗೆ ಐದು ತಿಂಗಳು ತುಂಬಿದ ಮೇಲೆ ನಾನು ಈ ಮನೆಗೆ ವಾಪಾಸಾದೆ. ನನ್ನ ಅಪ್ಪ ಪಾಪೂವನ್ನು ಇಂದಿಗೂ ನೋಡೇ ಇಲ್ಲ. ಅಮ್ಮ ಒಬ್ಬಳೇ ಬಂದು ನೋಡಿಕೊಂಡು ಹೋಗಿದ್ದಾಳೆ.

ನಮ್ಮಿಬ್ಬರ ನಡುವಿನ ದೈಹಿಕ ಸಂಬಂಧವೂ ನನ್ನ ಗಂಡನ ಇಷ್ಟಾನುಸಾರವೇ ನಡೆಯುತ್ತದೆ. ಎಂದಾದರೂ ಒಂದು ದಿನ ಅವರಿಗೆ ಮನಸ್ಸು ಬಂದಾಗ ನನ್ನ ಮೇಲೆ ಬಿದ್ದು ಬಯಕೆಯನ್ನು ತೀರಿಸಿಕೊಂಡು ಮಲಗಿಬಿಡುತ್ತಾರೆ. ನನ್ನ ದೇಹವನ್ನು ಉದ್ದೀಪಿಸುವ ಒಂದು ಮುನ್ನಲಿವೂ ಇಲ್ಲ.. ಒಲವಿನ ಪಿಸುಮಾತೂ ಇಲ್ಲ.. ತೃಪ್ತಿಯ ನಗೆಯೂ ಇಲ್ಲಾ.. ಅದೊಂದು ಯಾಂತ್ರಿಕ ಕ್ರಿಯೆಯಾಗಿಬಿಡುತ್ತದೆ ಅಷ್ಟೇ. ಕೆಲವೊಂದು ದಿನ ನನ್ನ ದೇಹವೇ ಅವರೊಂದಿಗೆ ಬೆರೆಯಲು ಹಾತೊರಿಯುತ್ತಿದ್ದಾಗ ಅವರ ಎದೆಯ ಮೇಲೆ ಮೆಲ್ಲಗೆ ಬೆರಳಾಡಿಸಿದರೆ ಯಾವ ಆತಂಕದಲ್ಲಿರುತ್ತಾರೋ ಗೊತ್ತಿಲ್ಲಾ.. ನನ್ನ ಕೈಯ್ಯನ್ನು ಕಿತ್ತು ಎಸೆದು ಅತ್ತ ತಿರುಗಿ ಮಲಗಿಬಿಡುತ್ತಾರೆ.

ಅವರಿಗೆ ನಮ್ಮ ದೈಹಿಕ ಮಿಲನದ ವಿಷಯದಲ್ಲಿ ಒಂದೇ ಅಲ್ಲ.. ಎಲ್ಲಾ ವಿಷಯಗಳಲ್ಲೂ ಯಾವಾಗಲೂ ಅವಸರವೇ ಅವಸರ. ಯಾವುದೇ ವಿಷಯದಲ್ಲೂ ಸ್ವಲ್ಪ ತಡವಾದರೂ ಅವರ ಮೂಗಿನ ಮೇಲೆಯೇ ಕೋಪ ಕಾದಿರುತ್ತದೆ. ಈ ಅವಸರದ ಜೊತೆಗೆ ಯಾವಾಗಲೂ ಅವರು ಅವರದೇ ವ್ಯಾಪಾರ ವಹಿವಾಟಿನ ಚಿಂತೆಯಲ್ಲಿ ಮುಳುಗಿರುತ್ತಾರೆ. ಅವರ ವ್ಯಾಪಾರದಲ್ಲಿನ ಲಾಭ ನಷ್ಟಗಳು ನಮ್ಮ ಸಾಂಸಾರಿಕ ಜೀವನದ ಮೇಲೂ ಆಗಾಗ್ಗೆ ಪರಿಣಾಮ ಬೀರುತ್ತಿರುತ್ತವೆ. ಭಾನುವಾರಗಳಂದು ಮನೆಯಲ್ಲಿದ್ದರೂ ಫೋನಿನಲ್ಲಿ ಮಾತನಾಡಿಕೊಂಡು, ಲ್ಯಾಪ್‌ಟಾಪನ್ನು ತೊಡೆಯ ಮೇಲಿಟ್ಟುಕೊಂಡು, ಲೆಕ್ಕದ ಪುಸ್ತಕಗಳನ್ನು ಸುತ್ತಲೂ ಹರಡಿಕೊಂಡು, ಏನೇನೋ ಕೂಡುತ್ತಾ ಕಳೆಯುತ್ತಾ ಕಾಲ ಕಳೆಯುತ್ತಾರೆ. ನಮ್ಮ ಮಲಗುವ ಕೋಣೆಗೆ ಹೊಂದಿಕೊಂಡು ಒಂದು ರೂಮಿದೆ. ಅದನ್ನು ಯಾವಾಗಲೂ ಬೀಗ ಹಾಕಿರುತ್ತಾರೆ. ಒಮ್ಮೊಮ್ಮೆ ಅದರೊಳಗೆ ಹೋಗಿ ಬಾಗಿಲು ಹಾಕಿಕೊಂಡು ಗಂಟೆಗಟ್ಟಲೆ ಕುಳಿತು ಬಿಡುತ್ತಾರೆ. ಅದರಲ್ಲಿ ಏನಿದೆಯೆಂದು ನನಗೆ ಇಂದಿಗೂ ತಿಳಿದಿಲ್ಲ. ಒಂದು ಪುಸ್ತಕವನ್ನೋ, ಪತ್ರಿಕೆಯನ್ನೋ ಓದುವ ಅಭ್ಯಾಸವೂ ಅವರಿಗಿಲ್ಲ. ನಿರಾಳವಾಗಿ ಕುಳಿತು ಒಂದು ಮಾಧುರ್ಯ ತುಂಬಿದ ಹಾಡನ್ನೋ ಅಥವಾ ಸಂಗೀತವನ್ನೋ ಎಂದೂ ಕೇಳಿದವರಲ್ಲ. ನಾನು ಈ ಮನೆಗೆ ಬಂದಾಗ ಇಂಗ್ಲೀಷ್ ಪತ್ರಿಕೆಯೊಂದು ಮಾತ್ರ ದಿನಾ ಬಂದು ಬೀಳುತಿತ್ತು. ಅದನ್ನು ಅವರು ಒಮ್ಮೆ ಕಣ್ಣಾಡಿಸುವುದನ್ನು ಬಿಟ್ಟರೆ ಗಂಭೀರವಾಗಿ ಓದುತ್ತಿರಲಿಲ್ಲ. ಆಮೇಲೆ ನಾನು ಅವರ ಅನುಮತಿ ಪಡೆದು ಕೆಲವೊಂದು ಕನ್ನಡದ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಹಾಕಿಸುವ ವ್ಯವಸ್ಥೆ ಮಾಡಿದ್ದೇನೆ. ಬಿಡುವಿನ ವೇಳೆಯಲ್ಲಿ ಒಬ್ಬಳೇ ಕುಳಿತುಕೊಂಡು ಓದುತ್ತಿರುತ್ತೇನೆ.

ನನ್ನ ಗಂಡ ಯಾವತ್ತೂ ನನಗೆ ದೈಹಿಕ ಹಿಂಸೆ ನೀಡಿಲ್ಲ. ಕೆಟ್ಟದಾಗಿ ಬಯ್ಯುವುದಿಲ್ಲ. ನಾನು ಕೇಳದಿದ್ದರೂ ನನಗೆ ಒಡವೆವಸ್ತ್ರಗಳ ರಾಶಿಯನ್ನೇ ತಂದುಕೊಟ್ಟಿದ್ದಾರೆ. ನನಗೆ ಓಡಾಡಲೆಂದೇ ಕಾರೊಂದನ್ನು ಮನೆಯ ಮುಂದೆ ನಿಲ್ಲಿಸಿದ್ದಾರೆ. ಆಗಾಗ ಎಂತಹುದೋ ಒಂದು ದೇಹ ಸುಖವನ್ನೂ ನೀಡುತ್ತಿರುತ್ತಾರೆ. ಅದರಿಂದಾಗಿ ಒಂದು ಮಗುವೂ ಜನಿಸಿ ನನ್ನ ಮಡಿಲಿನಲ್ಲಿದೆ. ನನ್ನಂತಹ ಸಾಧಾರಣ ಹೆಣ್ಣಿಗೆ ಇನ್ನೇನು ಬೇಕು ಎಂಬುದನ್ನು ಯೋಚಿಸಿ ಮನಸ್ಸು ನಿರಾಳವಾದರೂ ಅವರ ಬಗ್ಗೆ ನನ್ನ ಸುಪ್ತಮನಸ್ಸಿನಲ್ಲಿ ಎಂತಹುದೋ ಒಂದು ಅವ್ಯಕ್ತ ಭಯವಂತೂ ಮನೆಮಾಡಿದೆ. ಅದು ಅವರ ಮುಂಗೋಪದಿಂದಲೋ, ನಾನು ಅವರ ಅವಲಂಬಿತಳೆಂದೋ ಅಥವಾ ಅವರೊಂದಿಗೆ ಯಾವುದಾದರೂ ವಿಷಯದಲ್ಲಿ ಮನಸ್ತಾಪ ಕಟ್ಟಿಕೊಂಡರೆ ಬದುಕು ಛಿದ್ರವಾದೀತು ಎಂದೋ ಅಥವಾ ಬೇರೆ ಏನು ಕಾರಣದಿಂದಲೋ ನನಗೆ ತಿಳಿದಿಲ್ಲ. ಅವರು ಮನೆಯೊಳಗಿದ್ದಷ್ಟು ಕಾಲ ನಾನು ಒಂದು ಸಣ್ಣ